KACM210057992024

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.**

**ದಿನಾಂಕ 1 ನೇ ಆಗಸ್ಟ್ ಮಾಹೆ 2026**

**:: ಉಪಸ್ಥಿತರು ::**

**ಶ್ರೀ ಡಿ. ಕೆ. ಮಂಜುನಾಥ ಚಾರಿ**

**ಬಿ.ಎ., ಎಲ್‌ಎಲ್.ಬಿ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.**

**ಸಿ.ಸಿ. ಸಂಖ್ಯೆ : 4199/2024**

ಫಿರ್ಯಾದುದಾರರು : ಸರ್ಕಾರದ ಪರವಾಗಿ,
ಯಗಟಿ ಆರಕ್ಷಕ ಠಾಣೆ

(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)

– ವಿರುದ್ಧ –

ಆರೋಪಿ : ತಾಟಿಚೆರ್ಲ ರೆಹಮಾನ್
ಬಿನ್ ಟಿ. ಖಾಜಾಪೀರ್,
42 ವರ್ಷ, ಇದ್ದಿಲು ವ್ಯಾಪಾರ,
ವಾಸಃ ವೆಪರಲ್ಲಾ ಗ್ರಾಮ ಮತ್ತು ಅಂಚೆ,
ರಾಯದುರ್ಗಂ ಮಂಡಲಂ, ಅನಂತಪುರ
ಜಿಲ್ಲೆ, ಆಂಧ್ರಪ್ರದೇಶ.

(ಪ್ರತಿನಿಧಿಸುವವರು ಶ್ರೀ.ಆರ್.ಹೆಚ್., ವಕೀಲರು)

KACM210057992024

| | | |
|---|---|---|
| ಅಪರಾಧ ನಡೆದ ದಿನಾಂಕ | : | 08.09.2024 |
| ಅಪರಾಧ ವರದಿಯಾದ ದಿನಾಂಕ | : | 09.09.2024 |
| ಫಿರ್ಯಾದುದಾರರ ಹೆಸರು | : | ಶ್ರೀ. ಕೆ.ಎಂ.ಮಂಜಪ್ಪ |
| ಸಾಕ್ಷ್ಯ ಪ್ರಾರಂಭಿಸಿದ ದಿನಾಂಕ | : | 12.06.2026 |
| ತೀರ್ಪಿನ ದಿನಾಂಕ | : | 01.08.2026 |
| ಆರೋಪಿಸಲಾದ ದಂಡನೀಯ ಅಪರಾಧ | : | ಭಾರತೀಯ ನ್ಯಾಯ ಸಂಹಿತೆ, ಕಲಂ 281, 125(ಬಿ) ಮತ್ತು ಮೋಟಾರು ವಾಹನ ಕಾಯ್ದೆ ಕಲಂ 192, 196 |
| ನ್ಯಾಯಾಧೀಶರ ಅಭಿಪ್ರಾಯ | : | ಭಾರತೀಯ ನ್ಯಾಯ ಸಂಹಿತೆ, ಕಲಂ 281, 125(ಬಿ) ಮತ್ತು ಮೋಟಾರು ವಾಹನ ಕಾಯ್ದೆ ಕಲಂ 192, 196 ರ ರೀತ್ಯಾ ದಂಡನೀಯ ಅಪರಾಧಗಳ ಆರೋಪಗಳಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ನಿರ್ದೋಷಿಯೆಂದು ನಿರ್ಣಯಿಸಿ ಅವರ ಬಿಡುಗಡೆಗೆ ಆದೇಶಿಸಲಾಗಿದೆ. |
| ಸರ್ಕಾರದ ಪರವಾಗಿ | : | ಸಹಾಯಕ ಸರ್ಕಾರಿ ಅಭಿಯೋಜಕರು,ಕಡೂರು |
| ಆರೋಪಿತರ ಪರವಾಗಿ | : | ಶ್ರೀ. ಆರ್.ಹೆಚ್., ವಕೀಲರು |
| ತೀರ್ಪು ನೀಡಲು ತೆಗೆದುಕೊಂಡ ಒಟ್ಟು ಅವಧಿ | : | ವರ್ಷಗಳು 01 ತಿಂಗಳು 10 ದಿನಗಳು 24 |

D K MANJUNATHACHARI

Digitally signed by D K MANJUNATHACHARI
Date: 2026.08.03 17:03:46 +0530

(ಮಂಜುನಾಥ ಚಾರಿ ಡಿ.ಕೆ)
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,
ಕಡೂರು.

KACM210057992024

:: **ತೀರ್ಪು** ::

ಯಗಟಿ ಪೊಲೀಸರು ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 281, 125(ಬಿ) ಮತ್ತು ಮೋಟಾರು ವಾಹನ ಕಾಯ್ದೆ ಕಲಂ 192, 196 ರ ರೀತ್ಯಾ ದಂಡನೀಯ ಅಪರಾಧಗಳಿಗಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಆರೋಪಿ ವಿರುದ್ಧ ಆಪಾದನೆ ಏನೆಂದರೆ** :-

ದಿನಾಂಕ 08.09.2024 ರಂದು ಮಧ್ಯಾಹ್ನ 4-15 ಗಂಟೆ ಸಮಯದಲ್ಲಿ, ಯಗಟಿ ಪೊಲೀಸ್ ಠಾಣಾ ವ್ಯಾಪ್ತಿಯ ಸಣ್ಣೇನಹಳ್ಳಿ ಗೇಟ್ ನಿಂದ ಮುಂದೆ ಮಲ್ಲಪ್ಪ ರವರ ಜಮೀನಿನ ಬಳಿ ಚೌಳಹಿರಿಯೂರಿಗೆ ಹೋಗುವ ರಸ್ತೆಯಲ್ಲಿ, ಚಾಸಾ1 ಕೆ.ಎಂ. ಮಂಜಪ್ಪ ರವರು ಕೆಎ-18/ಇಎಂ-1590 ಹೋಂಡಾ ಶೈನ್ ದ್ವಿಚಕ್ರ ವಾಹನದಲ್ಲಿ ಚೌಳಹಿರಿಯೂರಿಗೆ ಹೋಗಲು ರಸ್ತೆಯ ಎಡ ಬದಿಯಲ್ಲಿ ಹೋಗುತ್ತಿರುವಾಗ, ಆರೋಪಿಯು ಚೌಳಹಿರಿಯೂರು ಕಡೆಯಿಂದ ಎಪಿ-09/ಬಿಟಿ-3271 ರ ಮಾರುತಿ ಸ್ವಿಪ್ಟ್ ಕಾರನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ರಸ್ತೆಯ ಬಲ ಬದಿಗೆ ಬಂದು ಚಾಸಾ-1 ರವರು ಚಾಲನೆ ಮಾಡುತ್ತಿದ್ದ ಕೆಎ-18/ಇಎಂ-1590 ರ ಹೋಂಡಾ ಶೈನ್ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿ, ಅಪಘಾತವನ್ನುಂಟು ಮಾಡಿದ್ದು, ಅಪಘಾತದ ಪರಿಣಾಮ ಚಾಸಾ-1 ರವರ ಎಡ ಮೊಣಕಾಲಿಗೆ, ಸೊಂಟಕ್ಕೆ, ಎಡಕಾಲಿನ ಹೆಬ್ಬೆರಳಿಗೆ ಪೆಟ್ಟಾಗಿ ಗಂಭೀರ ಸ್ವರೂಪದ ಗಾಯವಾಗಿದ್ದು ಹಾಗೂ ಸದರಿ ವಾಹನದ

KACM210057992024

ಆರ್.ಸಿ. ಅವಧಿ ಮುಗಿದಿದ್ದು, ವಿಮೆ ಇಲ್ಲದೇ ಇರುವ ವಾಹನವನ್ನು ಚಲಾಯಿಸಿರುವ ಕಾರಣ, ಆರೋಪಿಯು ಭಾರತೀಯ ನ್ಯಾಯ ಸಂಹಿತೆ ಕಲಂ 281, 125(ಬಿ) ಮತ್ತು ಮೋಟಾರು ವಾಹನ ಕಾಯ್ದೆ ಕಲಂ 192, 196 ರ ಅಡಿಯಲ್ಲಿ ಅಪರಾಧಗಳನ್ನು ಮಾಡಿರುತ್ತಾರೆಂಬುದಾಗಿದೆ.

**3.** ದೋಷಾರೋಪಣೆ ಪತ್ರವನ್ನು ಸಲ್ಲಿಸಿದ ನಂತರ ನ್ಯಾಯಾಲಯವು ಮೇಲ್ಕಂಡ ಆರೋಪಿ ವಿರುದ್ಧ ಮೇಲ್ಕಂಡ ಕಲಂಗಳನ್ವಯ ಶಿಕ್ಷಾರ್ಹ ಕೃತ್ಯಗಳ ಬಗ್ಗೆ ಸಂಜ್ಞೇಯತೆ ತೆಗೆದುಕೊಂಡು ಆರೋಪಿ ವಿರುದ್ಧ ಸಮನ್ಸ್ ಜಾರಿ ಮಾಡಿದಾಗ, ಆರೋಪಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ನಂತರ ಆರೋಪಿಗೆ ದೋಷಾರೋಪಣಾ ಪತ್ರ ಹಾಗೂ ಅದಕ್ಕೆ ಲಗತ್ತಿಸಿರುವ ಎಲ್ಲಾ ದಾಖಲೆಗಳ ಪತ್ರಗಳನ್ನು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 230 ರಡಿಯಲ್ಲಿ ನೀಡಲಾಗಿದೆ. ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಲಾಯಿತು. ಆರೋಪಿ ತಾವು ತಪ್ಪು ಮಾಡಿಲ್ಲ ವಿಚಾರಣೆ ಮಾಡಬೇಕೆಂದು ಮನವಿ ಮಾಡಿದ ಕಾರಣ ಪ್ರಕರಣದ ವಿಚಾರಣೆ ನಡೆಸಲಾಯಿತು.

**4.** ಅಭಿಯೋಜನೆಯು 6 ಸಾಕ್ಷಿದಾರರನ್ನು ಅವರನ್ನು ಫ್ರಾಸಾ-1 ರಿಂದ 6 ಎಂದು ವಿಚಾರಣೆಗೆ ಒಳಪಡಿಸಿ, 22 ದಾಖಲೆಗಳನ್ನು ಹಾಜರುಪಡಿಸಿದ್ದು, ಸದರಿ ದಾಖಲೆಗಳನ್ನು ನಿಪಿ-1 ರಿಂದ 22 ಎಂದು ಗುರುತಿಸಿದ್ದು, ಸಾಕ್ಷಿಯಿಂದ ಆರೋಪಿ

KACM210057992024

ವಿರುದ್ಧ ಕಂಡು ಬರುವ ಎಲ್ಲಾ ಸಂಗತಿಗಳನ್ನು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 351 ರಂತೆ ಓದಿ ಹೇಳಲಾಗಿ, ಅವರು ಅಲ್ಲಗಳೆದಿರುತ್ತಾರೆ ಹಾಗೂ ತಮ್ಮ ಪರವಾಗಿ ಯಾವುದೇ ಸಾಕ್ಷ್ಯವನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ.

**5.** ಪ್ರಕರಣದ ವಿಚಾರಣೆಯ ತರುವಾಯ ಉಭಯ ಪಕ್ಷಗಾರರ ವಾದವನ್ನು ಆಲಿಸಿ ಕಡತವನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ನ್ಯಾಯಾಲಯದ ನಿರ್ಣಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆ ಅವುಗಳೆಂದರೆಃ–

**ಅಂಶಗಳು**

**ಅಂಶ–1 :** 08.09.2024 ರಂದು ಮಧ್ಯಾಹ್ನ 4.15 ಗಂಟೆ ಸಮಯದಲ್ಲಿ ಯಗಟಿ ಪೋಲಿಸ್ ಠಾಣಾ ಸರಹದ್ದಿನ ಸಣ್ಣೇನಹಳ್ಳಿ ಗೇಟ್‌ನಿಂದ ಮುಂದೆ ಮಲ್ಲಪ್ಪರವರ ಜಮೀನಿನ ಬಳಿ ಚೌಳಹಿರಿಯೂರಿಗೆ ಹೋಗುವ ರಸ್ತೆಯಲ್ಲಿ ಚಾಸಾ.1 ಕೆ.ಮಂಜಪ್ಪ ರವರು ಕೆಎ–18/ಇಎಂ–1590 ರ ಹೋಂಡಾ ಶೈನ್ ದ್ವಿಚಕ್ರ ವಾಹನದಲ್ಲಿ ಚೌಳಹಿರಿಯೂರಿಗೆ ಹೋಗಲು ರಸ್ತೆಯ ಎಡಬದಿಯಲ್ಲಿ ಹೋಗುತ್ತಿರುವಾಗ, ಆರೋಪಿಯು ಚೌಳಹಿರಿಯೂರು ಕಡೆಯಿಂದ ಎಪಿ–09/ಬಿಟಿ–3271 ರ ಸ್ವಿಫ್ಟ್ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ರಸ್ತೆಯ ಬಲಬದಿಗೆ ಹೋಗಿ ಚಾಸಾ–1 ರವರು ಚಾಲನೆ ಮಾಡುತ್ತಿದ್ದ ವಾಹನಕ್ಕೆ ಡಿಕ್ಕಿಪಡಿಸಿದ್ದು, ಆ ಮೂಲಕ

ಆರೋಪಿಯು ಭಾರತೀಯ ನ್ಯಾಯ ಸಂಹಿತೆ ಕಲಂ 281 ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ–2** : ಮೇಲೆ ಹೇಳಲಾದ ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಆರೋಪಿಯು ಅಪಘಾತಪಡಿಸಿದರ ಪರಿಣಾಮ ಚಾಸಾ–1 ರವರ ಎಡ ಮೊಣಕಾಲಿಗೆ, ಸೊಂಟಕ್ಕೆ, ಎಡಕಾಲಿನ ಹೆಬ್ಬೆರಳಿಗೆ ಪೆಟ್ಟಾಗಿ ಗಂಭೀರ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿ ಭಾರತೀಯ ನ್ಯಾಯ ಸಂಹಿತೆ ಕಲಂ 125(ಬಿ) ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ–3** : ಮೇಲೆ ಹೇಳಲಾದ ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಆರೋಪಿಯು ಆರ್.ಸಿ. ಅವಧಿ ಮುಗಿದಿರುವ ಸ್ವಿಫ್ಟ್ ಕಾರನ್ನು ಚಾಲನೆ ಮಾಡಿ ಚಾಸಾ–1 ರವರ ವಾಹನಕ್ಕೆ ಡಿಕ್ಕಿಪಡಿಸಿದ್ದು, ಆ ಮೂಲಕ ಆರೋಪಿಯು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 192 ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ–4** : ಮೇಲೆ ಹೇಳಲಾದ ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಆರೋಪಿಯು ವಿಮೆ ಇಲ್ಲದ ಸ್ವಿಫ್ಟ್ ಕಾರನ್ನು ಚಾಲನೆ ಮಾಡಿ ಚಾಸಾ–1 ರವರ ವಾಹನಕ್ಕೆ ಡಿಕ್ಕಿಪಡಿಸಿದ್ದು, ಆ ಮೂಲಕ ಆರೋಪಿಯು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 196 ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ–5** : ಹಾಗಿದ್ದರೆ ಏನು ಆದೇಶ ?

6. ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ನಿರ್ಣಯಗಳು ಈ ಕೆಳಗಿನಂತೆ ಇದೆಃ–

| | | |
|---|---|---|
| ಅಂಶ 1 | – | ನಕಾರಾತ್ಮಕವಾಗಿ |
| ಅಂಶ 2 | – | ನಕಾರಾತ್ಮಕವಾಗಿ |
| ಅಂಶ 3 | – | ನಕಾರಾತ್ಮಕವಾಗಿ |
| ಅಂಶ 4 | – | ನಕಾರಾತ್ಮಕವಾಗಿ |
| ಅಂಶ 5 | – | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿಃ |

:: **ಕಾರಣಗಳು** ::

7. ಅಂಶ 1 ರಿಂದ 4 :: ಈ ಮೇಲಿನ ಎಲ್ಲಾ ಅಂಶಗಳು ಒಂದಕ್ಕೊಂದು ಸಂಬಂಧಿಸಿರುವುದರಿಂದ ವಿಷಯಗಳ ಪುನರಾವರ್ತನೆಯನ್ನು ತಡೆಯಲು ಅವುಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**7.1.** ದಿನಾಂಕ 08.09.2024 ರಂದು ಮಧ್ಯಾಹ್ನ 4-15 ಗಂಟೆ ಸಮಯದಲ್ಲಿ, ಯಗಟಿ ಪೊಲೀಸ್ ಠಾಣಾ ವ್ಯಾಪ್ತಿಯ ಸಣ್ಣೇನಹಳ್ಳಿ ಗೇಟ್ ನಿಂದ ಮುಂದೆ ಮಲ್ಲಪ್ಪ ರವರ ಜಮೀನಿನ ಬಳಿ ಚೌಳಹಿರಿಯೂರಿಗೆ ಹೋಗುವ ರಸ್ತೆಯಲ್ಲಿ, ಚಾಸಾ1 ಕೆ.ಎಂ. ಮಂಜಪ್ಪ ರವರು ಕೆಎ-18/ಇಎಂ-1590 ಹೋಂಡಾ ಶೈನ್ ದ್ವಿಚಕ್ರ ವಾಹನದಲ್ಲಿ ಚೌಳಹಿರಿಯೂರಿಗೆ ಹೋಗಲು ರಸ್ತೆಯ ಎಡ ಬದಿಯಲ್ಲಿ ಹೋಗುತ್ತಿರುವಾಗ, ಆರೋಪಿಯು ಚೌಳಹಿರಿಯೂರು ಕಡೆಯಿಂದ ಎಪಿ-09/ಬಿಟಿ-3271 ರ ಮಾರುತಿ ಸ್ವಿಫ್ಟ್ ಕಾರನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ರಸ್ತೆಯ ಬಲ ಬದಿಗೆ ಬಂದು ಚಾಸಾ-1 ರವರು ಚಾಲನೆ ಮಾಡುತ್ತಿದ್ದ ಕೆಎ-18/ಇಎಂ-1590 ರ ಹೋಂಡಾ ಶೈನ್ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿ, ಅಪಘಾತವನ್ನುಂಟು ಮಾಡಿದ್ದು, ಅಪಘಾತದ ಪರಿಣಾಮ ಚಾಸಾ-1 ರವರ ಎಡ ಮೊಣಕಾಲಿಗೆ, ಸೊಂಟಕ್ಕೆ, ಎಡಕಾಲಿನ ಹೆಬ್ಬೆರಳಿಗೆ ಪೆಟ್ಟಾಗಿ ಗಂಭೀರ ಸ್ವರೂಪದ ಗಾಯವಾಗಿದ್ದು ಹಾಗೂ ಸದರಿ ವಾಹನದ ಆರ್.ಸಿ. ಅವಧಿ ಮುಗಿದಿದ್ದು, ವಿಮೆ ಇಲ್ಲದೇ ವಾಹನವನ್ನು ಚಲಾಯಿಸಿರುವ ಕಾರಣ, ಆರೋಪಿಯು ಭಾರತೀಯ ನ್ಯಾಯ ಸಂಹಿತೆ ಕಲಂ 281, 125(ಬಿ) ಮತ್ತು ಮೋಟಾರು ವಾಹನ ಕಾಯ್ದೆ ಕಲಂ 192, 196 ರ ಅಡಿಯಲ್ಲಿ ಮಾಡಿರುತ್ತಾರೆ ಎಂಬುದಾಗಿರುತ್ತದೆ.

**8.** ಚಾಸಾ–1/ಪ್ರಾಸಾ–1 ರವರು ನಿಪಿ1 ರಂತೆ ಠಾಣಾಧಿಕಾರಿಗಳಾಗಿದ್ದ ಚಾಸಾ–8/ಪ್ರಾಸಾ–6 ರವರಿಗೆ ದಿನಾಂಕ 09.09.2024 ರಂದು ನಿಪಿ.1 ರಂತೆ ಪ್ರಥಮ ಮಾಹಿತಿಯನ್ನು ನೀಡಿರುತ್ತಾರೆ. ಸದರಿ ಪ್ರಥಮ ವರ್ತಮಾನದ ಸಂಕ್ಷಿಪ್ತ ಸಾರಾಂಶವೇನೆಂದರೆ, ದಿನಾಂಕ 08.09.2024 ರಂದು ಸಂಜೆ 4–15 ಗಂಟೆ ಸಮಯದಲ್ಲಿ ಚಾಸಾ–1 ರವರು ತನಗೆ ಸೇರಿದ ಕೆಎ–18/ಇಎಂ–1519 ನೋಂದಣಿ ಸಂಖ್ಯೆಯ ಹೋಂಡಾ ದ್ವಿಚಕ್ರ ವಾಹನದಲ್ಲಿ ಸಣ್ಣೇನಹಳ್ಳಿ ಗೇಟ್ ಬಳಿ ಡಾಂಬರು ರಸ್ತೆಯಲ್ಲಿ ಹೋಗುತ್ತಿದ್ದಾಗ, ಒಂದು ಮಾರುತಿ ಕಂಪನಿಯ ಕಾರನ್ನು ಅದರ ಚಾಲಕನು ಸದರಿ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿರುತ್ತಾರೆ. ನಂತರ ದಾರಿಯಲ್ಲಿ ಹೋಗುತ್ತಿದ್ದ ಕಾರಿನ ಚಾಲಕರು ಮತ್ತು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ಚಾಸಾ–1 ರವರ ಪರಿಚಯಸ್ಥರಾದ ಚಾಸಾ–4/ಪ್ರಾಸಾ–3 ರವರು ಚಾಸಾ–1 ರವರನ್ನು ಉಪಚರಿಸಿ ಕಡೂರಿನ ಸರ್ಕಾರಿ ಆಸ್ಪತ್ರೆಗೆ 108 ಆಂಬ್ಯುಲೆನ್ಸ್ ಮೂಲಕ ಕಳುಹಿಸಿ ಕೊಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ಅಲ್ಲದೆ ಡಿಕ್ಕಿಪಡಿಸಿದ ಕಾರಿನ ಸಂಖ್ಯೆ–ಎಪಿ–09/ಬಿಟಿ–3271 ಆಗಿರುತ್ತದೆ ಎಂದು ತಿಳಿಸಿರುತ್ತಾರೆ.

**8.1.** ನಿಪಿ.1 ರ ಅಂಶಗಳನ್ನು ಪರಿಶೀಲಿಸಿದಾಗ, ಕಾರನ್ನು ಅತೀವೇಗದಿಂದ ಚಲಾಯಿಸಿಕೊಂಡು ಚಾಸಾ–1 ರವರ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿದವರು ಯಾರು ಎಂದು ನಿಪಿ.1 ರಲ್ಲಿ ತಿಳಿಸಿರುವುದಿಲ್ಲ. ಅಲ್ಲದೆ ಕಾರಿನ ಚಾಲಕನು ಅಪಘಾತಪಡಿಸಿ ಸ್ಥಳದಿಂದ ಓಡಿ ಹೋಗಿರುವ ಬಗ್ಗೆಯು ಸಹ ಯಾವುದೇ ವಿವರಣೆ ಇರುವುದಿಲ್ಲ. ಕೇವಲ

ದಾರಿಯಲ್ಲಿ ಹೋಗುತ್ತಿದ್ದ ಕಾರಿನ ಚಾಲಕ ಮತ್ತು ಚಾಸಾ-4 ರವರು ತನ್ನನ್ನು ಉಪಚರಿಸಿದರು ಎಂದು ನಿಪಿ.1 ರಲ್ಲಿ ನಮೂದಿಸಲಾಗಿರುತ್ತದೆ. ಹಾಗಾದರೆ ಅಪಘಾಪಡಿಸಿದ್ದ ಕಾರಿನ ಚಾಲಕರು ಚಾಸಾ-1 ರವರಿಗೆ ಸ್ಪಂದಿಸಿದರೆ ಅಥವಾ ಸ್ಪಂದಿಸಲಿಲ್ಲವೇ ಎಂಬ ಯಾವುದೇ ಮಾಹಿತಿ ಇರುವುದಿಲ್ಲ.

**8.2.** ಬಹುಮುಖ್ಯವಾಗಿ ಚಾಸಾ-1/ಪ್ರಾಸಾ-1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ತಾನು ಯಾವುದೋ ಕೆಲಸಕ್ಕೆ ಪೋಲಿಸ್ ಠಾಣೆಗೆ ಹೋಗಿದ್ದಾಗ, ನಿಪಿ.1 ಪ್ರತಿಗೆ ಸಹಿ ಮಾಡಿದ್ದು, ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಅಭಿಯೋಜನೆಯು ಪಾಟೀ ಸವಾಲಿಗೆ ಒಳಪಡಿಸಿದರು ಸಹ ತಮ್ಮ ನಿಲುವಿಗೆ ಪೂರಕವಾದ ಉತ್ತರವನ್ನು ಪಡೆದಿರುವುದಿಲ್ಲ.

**8.3.** ಚಾಸಾ-1/ಪ್ರಾಸಾ-1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿಯೇ ಸಂಖ್ಯೆ-ಎಪಿ-09/ಬಿಟಿ-3271 ನೋಂದಣಿಯ ಕಾರನ್ನು ಅತೀವೇಗ ಅಥವಾ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ತನ್ನ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿದ್ದರು ಎಂದು ನುಡಿದಿರುವುದಿಲ್ಲ. ಅಲ್ಲದೆ ಚಾಸಾ1 ರವರ ಹೇಳಿಕೆಯಲ್ಲಿ ಚಾಸಾ-4/ಪ್ರಾಸಾ-3 ರವರು ತನ್ನನ್ನು ಅಪಘಾತ ಸ್ಥಳದಲ್ಲಿ ಉಪಚರಿಸಿದ್ದರು ಎಂದು ನುಡಿದಿರುತ್ತಾರೆ. ಆದರೆ ಚಾಸಾ-4/ಪ್ರಾಸಾ-3 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ತನಗೆ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ. ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂದು

ನುಡಿದಿದ್ದು, ತನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಮತ್ತು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿಯಾಗಿ ವಿಚಾರಣೆಗೆ ಒಳಪಡಿಸಿದ್ದರೂ ಸಹ ತಮ್ಮ ನಿಲುವಿಗೆ ಪೂರಕವಾದ ಉತ್ತರ ಪಡೆದಿರುವುದಿಲ್ಲ.

**8.4.** ಅಭಿಯೋಜನೆಯ ಚಾಸಾ-2/ಪ್ರಾಸಾ-5 ರವರನ್ನು ಪಂಚನಾಮೆ ಸಾಕ್ಷಿಯನ್ನಾಗಿ ವಿಚಾರಣೆಗೆ ಒಳಪಡಿಸಿದ್ದು, ಇವರು ಸಹ ತಮ್ಮ ಮುಖ್ಯ ವಿಚಾರಣೆಯಲ್ಲಿ, ತನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಮತ್ತು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿಯಾಗಿ ವಿಚಾರಣೆಗೆ ಒಳಪಡಿಸಿದ್ದರೂ ಸಹ ತಮ್ಮ ನಿಲುವಿಗೆ ಪೂರಕವಾದ ಉತ್ತರ ಪಡೆದಿರುವುದಿಲ್ಲ. ಆದುದರಿಂದಾಗಿ ಅಭಿಯೋಜನೆಯು ನಿಪಿ.3 ರಂತೆ ಚಾಸಾ-9/ಪ್ರಾಸಾ-4 ರವರು ಸ್ಥಳ ಪಂಚನಾಮೆಯನ್ನು ಕಡೂರು ತಾಲ್ಲೂಕು, ಯಗಟಿ ಹೋಬಳಿ, ಸಣ್ಣೇನಹಳ್ಳಿ ಗೇಟ್ ನಿಂದ ಚೌಳಹಿರಿಯೂರಿಗೆ ಹೋಗುವ ರಸ್ತೆಯಲ್ಲಿ ಮಲ್ಲಪ್ಪ ರವರ ತೋಟದ ಬಳಿ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿದ್ದರು ಎಂಬುವುದನ್ನು ಹಾಗೂ ಸದರಿ ಸ್ಥಳದಿಂದ ಎಪಿ-09/ಬಿಟಿ-3271 ನೋಂದಣಿ ಸಂಖ್ಯೆಯ ಕಾರು ಮತ್ತು

KACM210057992024

ಕೆಎ-18/ಇಎಂ-1590 ರ ನೋಂದಣಿ ಸಂಖ್ಯೆಯ ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದರು ಎಂದು ರುಜುವಾತುಪಡಿಸಿರುವುದಿಲ್ಲ.

**9.** ಮೇಲೆ ಉಲ್ಲೇಖಿಸಿದಂತೆ, ಆರೋಪಿ ತನ್ನ ಎಪಿ-09/ಬಿಟಿ-3271 ನೋಂದಣಿ ಸಂಖ್ಯೆಯ ಕಾರನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಚಾಸಾ-1 ರವರು ಚಲಾಯಿಸುತ್ತಿದ್ದ ಕೆಎ-18/ಇಎಂ-1590 ರ ನೋಂದಣಿ ಸಂಖ್ಯೆಯ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿದ್ದರು ಎಂಬುವುದನ್ನು ನಿಸ್ಸಂಶಯಯುತವಾಗಿ ಅಭಿಯೋಜನೆಯು ರುಜುವಾತುಪಡಿಸಿರುವುದಿಲ್ಲ. ಅಲ್ಲದೆ ಸದರಿ ಎಪಿ-09/ಬಿಟಿ-3271 ನೋಂದಣಿ ಸಂಖ್ಯೆಯ ಕಾರಿಗೆ ನೋಂದಣಿಯ ಅವಧಿ ಮುಗಿದಿತ್ತು ಮತ್ತು ವಿಮೆ ಇರಲಿಲ್ಲ ಎಂಬುದನ್ನು ಸಹ ನಿಸ್ಸಂಶಯಯುತವಾಗಿ ಅಭಿಯೋಜನೆಯು ರುಜುವಾತುಪಡಿಸಿರುವುದಿಲ್ಲ. ಆದುದರಿಂದಾಗಿ ಅಂಶ-1 ರಿಂದ 4 ಅನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**10.** ಅಂಶ-5 :: ಈ ಮೇಲಿನ ಅಂಶ-1 ರಿಂದ 4 ರಲ್ಲಿ ಚರ್ಚಿಸಲಾದಂತೆ ಈ ಕೆಳಕಂಡ .....

## ಆದೇಶ

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 483 ರಡಿಯಲ್ಲಿ ದತ್ತವಾದ ಅಧಿಕಾರದಿಂದ ಆರೋಪಿ ವಿರುದ್ಧ ಮಾಡಲಾದ ಭಾರತೀಯ ನ್ಯಾಯ ಸಂಹಿತೆ, ಕಲಂ 281,

KACM210057992024

125(ಬಿ) ಮತ್ತು ಮೋಟಾರು ವಾಹನ ಕಾಯ್ದೆ ಕಲಂ 192, 196 ರ ಅಡಿಯಲ್ಲಿನ ದಂಡನೀಯ ಅಪರಾಧಗಳ ಆರೋಪದಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ಬಿಡುಗಡೆಗೆ ಆದೇಶಿಸಲಾಗಿದೆ.

ಆರೋಪಿ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಮುಚ್ಚಳಿಕೆ ಪತ್ರವು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 483 ರ ಪ್ರಕಾರ ಆರು ತಿಂಗಳವರೆಗೆ ಚಾಲ್ತಿಯಲ್ಲಿರತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ಕೊಟ್ಟು ಬೆರಳಚ್ಚು ಮಾಡಿದ ನಂತರ ನಾನು ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ನಂತರ ಈ ದಿನ ಅಂದರೆ ದಿನಾಂಕ 01.08.2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ.)

D K MANJUNATHACHARI

Digitally signed by D K MANJUNATHACHARI
Date: 2026.08.03 17:03:57 +0530

(ಮಂಜುನಾಥ ಚಾರಿ ಡಿ.ಕೆ)
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ,ಕಡೂರು.

:: **ಅನುಬಂಧ** ::

1. ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ :

| | | |
|---|---|---|
| ಫ್ರಾಸಾ.1 | : | ಶ್ರೀ ಮಂಜಪ್ಪ |
| ಫ್ರಾಸಾ.2 | : | ಶ್ರೀ ಕಲ್ಲೇಶ |
| ಫ್ರಾಸಾ.3 | : | ಶ್ರೀ ವೆಂಕಟೇಶ |
| ಫ್ರಾಸಾ.4 | : | ಶ್ರೀ ಮಂಜುನಾಥ ಜಿ |
| ಫ್ರಾಸಾ.5 | : | ಶ್ರೀ ದೇವರಾಜಪ್ಪ |

KACM210057992024

ಫಾಸಾ.6 : ಶ್ರೀ ಟಿ. ಶೇಖರಪ್ಪ.

2. ಅಭಿಯೋಜನೆ ಪರ ಗುರ್ತಿಸಿದ ದಾಖಲಾತಿಗಳು :

| | | |
|---|---|---|
| ನಿಪಿ–1 | : | ದೂರಿನ ಪ್ರತಿ |
| ನಿಪಿ–1(ಎ ಮತ್ತು ಬಿ) | : | ಸಾಕ್ಷಿಗಳ ಸಹಿ |
| ನಿಪಿ–2 | : | ನೋಟಿಸ್ಸಿನ ಪ್ರತಿ |
| ನಿಪಿ–2(ಎ ಮತ್ತು ಬಿ) | : | ಸಾಕ್ಷಿಗಳ ಸಹಿ |
| ನಿಪಿ–3 | : | ಸ್ಥಳ ಪಂಚನಾಮೆ |
| ನಿಪಿ–3(ಎ ರಿಂದ ಡಿ) | : | ಸಾಕ್ಷಿಗಳ ಸಹಿ |
| ನಿಪಿ–4 ಮತ್ತು 5 | : | ಫೋಟೋಗಳು |
| ನಿಪಿ–6 | : | ಅಮಾನತ್ತು ಪಂಚನಾಮೆ |
| ನಿಪಿ–6(ಎ ರಿಂದ ಡಿ) | : | ಸಾಕ್ಷಿಗಳ ಸಹಿ |
| ನಿಪಿ–7 | : | ನೋಟಿಸ್ಸಿನ ಪ್ರತಿ |
| ನಿಪಿ–7(ಎ ಮತ್ತು ಸಿ) | : | ಸಾಕ್ಷಿಗಳ ಸಹಿ |
| ನಿಪಿ–8 ಮತ್ತು 9 | : | ಫೋಟೋಗಳು |
| ನಿಪಿ–10 | : | ಹೇಳಿಕೆಯ ಭಾಗ |
| ನಿಪಿ–11 | : | ಹೇಳಿಕೆಯ ಭಾಗ |
| ನಿಪಿ–12 | : | ಸ್ವತ್ತಿನ ಪಟ್ಟಿ |
| ನಿಪಿ–12(ಎ) | : | ಸಾಕ್ಷಿಯ ಸಹಿ |
| ನಿಪಿ–13 | : | ಇಂಡಿಮೆನಿಟಿ ಬಾಂಡ್ |
| ನಿಪಿ–13(ಎ) | : | ಸಾಕ್ಷಿಯ ಸಹಿ |
| ನಿಪಿ–14 ರಿಂದ 17 | : | ನೋಟಿಸ್ಸಿನ ಪ್ರತಿಗಳು |

KACM210057992024

ನಿಪಿ–14 ರಿಂದ 17(ಎ): ಸಾಕ್ಷಿಗಳ ಸಹಿ
ನಿಪಿ–18 : ಮನವಿ ಪತ್ರ
ನಿಪಿ–18(ಎ) : ಸಾಕ್ಷಿಯ ಸಹಿ
ನಿಪಿ–19 : ಗಾಯದ ಪ್ರಮಾಣ ಪತ್ರ
ನಿಪಿ–20 : ಮನವಿ ಪತ್ರ
ನಿಪಿ–20(ಎ) : ಸಾಕ್ಷಿಯ ಸಹಿ
ನಿಪಿ–21 : ಪರೀಕ್ಷಾ ವರದಿ
ನಿಪಿ–22 : ಪ್ರಥಮ ವರ್ತಮಾನ ವರದಿ
ನಿಪಿ–22(ಎ) : ಸಾಕ್ಷಿಯ ಸಹಿ.

**3.** ಆರೋಪಿತರ ಪರ ಯಾವುದೇ ಸಾಕ್ಷಿ ಮತ್ತು ದಾಖಲೆಗಳು :– ಇರುವುದಿಲ್ಲ.

**4.** ಮುದ್ದೆ ಮಾಲುಗಳು :– ಇರುವುದಿಲ್ಲ.

D K MANJUNATHACHARI
Digitally signed by D K MANJUNATHACHARI
Date: 2026.08.03 17:04:06 +0530

(ಮಂಜುನಾಥ ಚಾರಿ ಡಿ.ಕೆ)
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.